ಕರ್ನಾಟಕ ಸರ್ಕಾರ

ವಿಕಾಸ ಸೌಧ, ಬೆಂಗಳೂರು.

ಸಂಖ್ಯೆ:MWD/ 15 /WBS/2017-18 ದಿನಾಂಕ:20-6-2018

## ಸುತ್ತೋಲೆ

ವಿಷಯ: ಮುಸ್ಲಿಂ ಖಬರಸ್ಥಾನ್‌ಗಳಲ್ಲಿ ಅಂತ್ಯಕ್ರಿಯೆಗೆ ಅಡ್ಡಿಪಡಿಸಲಾಗುತ್ತಿರುವ ಘಟನೆಗಳನ್ನು ತೀವ್ರವಾಗಿ ನಿಯಂತ್ರಿಸುವ ಕುರಿತು.

ಉಲ್ಲೇಖ: ಆಡಳಿತಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ರವರ ಸುತ್ತೋಲೆ ಸಂಖ್ಯೆ:KSBW/SOS/5/2017-18, ದಿನಾಂಕ:08-12-2017.

* * * * *

ಉಲ್ಲೇಖಿಸಲಾಗಿರುವ ಸುತ್ತೋಲೆಯಲ್ಲಿ ಖಬರಸ್ಥಾನ್ ಪ್ರದೇಶವನ್ನು ಯೋಜನಾಬದ್ಧವಾಗಿ ಸದ್ಬಳಕೆ ಮಾಡುವ ಕುರಿತು ನಿರ್ದೇಶನಗಳನ್ನು ನೀಡಲಾಗಿರುತ್ತದೆ. ವಕ್ಫ್‌ಗೆ ಸೇರಿದ ಎಲ್ಲಾ ಖಬರಸ್ಥಾನ್‌ಗಳಲ್ಲಿ ಮಸ್ಲಕ್‌ನ ತಾರತಮ್ಯವಿಲ್ಲದೆ ದಫನ್ ಮಾಡಲು ಅವಕಾಶ ಕಲ್ಪಿಸಲು ಸೂಚಿಸಲಾಗಿದ್ದರೂ ಸಹ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ಪಟ್ಟಣದಲ್ಲಿ ಸುಮಾರು 78 ವರ್ಷದ ತಬ್‌ಲೀಗಿ ಜಮಾತ್‌ಗೆ ಸೇರಿದ ಕುಟುಂಬದವಳಾದ ಕಾರಣ ಸುನ್ನಿ ಸಮುದಾಯದ ಖಬರಸ್ಥಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲು ಅಡ್ಡಿಪಡಿಸಲಾದ ಘಟನೆ ವರದಿಯಾಗಿದೆ. ಇದರಿಂದಾಗಿ ಜಿಲ್ಲಾಡಳಿತವು ಮಧ್ಯಪ್ರವೇಶಿಸಿ 21 ಜನರ ವಿರುದ್ಧ ಠಾಣೆಯಲ್ಲಿ ಐ.ಪಿ.ಸಿ. ಕಲಂ 506, 504, 297, 149, 143 ಮತ್ತು 198ರ ಅಡಿ ಪ್ರಕರಣ ದಾಖಲಿಸಿ ತನಿಖೆ ಮುಂದುವರೆದಿರುತ್ತದೆ.

ರಾಜ್ಯದ ಮುಸ್ಲಿಂ ಸಮುದಾಯದಲ್ಲಿ ಶಿಯಾ ಮತ್ತು ಮಹದವಿಯ ಪಂಗಡಗಳು ಪ್ರತ್ಯೇಕ ಖಬರಸ್ಥಾನ್‌ಗಳನ್ನು ಹೊಂದಿರುತ್ತವೆ. ಉಳಿದ ಎಲ್ಲಾ ಸುನ್ನಿ ಮತಬಾಂಧವರು ಖಾಸಗಿ ಖಬರಸ್ಥಾನ್ ಹೊರತುಪಡಿಸಿ ಒಂದೇ ಖಬರಸ್ಥಾನದಲ್ಲಿ ಅಂತ್ಯಕ್ರಿಯೆ ಮಾಡುವ ವಾಡಿಕೆಯಾಗಿರುತ್ತದೆ. ವಕ್ಫ್ ಕಾಯ್ದೆಯಲ್ಲಿ ಶಿಯಾ ಮತ್ತು ಸುನ್ನಿ ಕೇವಲ ಎರಡು ಪಂಗಡಗಳು ಪುರಸ್ಕೃತಗೊಂಡಿರುತ್ತವೆ. ಈ ಕಾಯ್ದೆ ಅಡಿಯಲ್ಲಿ ನೋಂದಾಯಿಸಲಾದ ಅಥವಾ ಕಾಲಾಂತರದಿಂದ ಉಪಯೋಗಿಸಲಾಗುತ್ತಿರುವ ಹಾಗೂ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಂದ ಮಂಜೂರಾತಿ ಪಡೆದಿರುವ ಪ್ರದೇಶಗಳಲ್ಲಿ ಅಂತ್ಯಕ್ರಿಯೆ ಮಾಡಲಾಗುತ್ತಿದೆ.

ಮೇಲೆ ವಿವರಿಸಿದಂತಹ ಘಟನೆಗಳು ಪುನರಾವರ್ತಿಸಲು ಅವಕಾಶ ಕಲ್ಪಿಸದಿರುವುದು ವಕ್ಫ್ ಮಂಡಳಿಯ ದೃಢಸಂಕಲ್ಪವಾಗಿರುತ್ತದೆ. ರಾಜ್ಯದ ಯಾವುದೇ ಪ್ರದೇಶದಲ್ಲಿ ಸುನ್ನಿ ಅಥವಾ ಷಾಫಿ ಮಸ್ಲಕ್‌ನ ಮುಸಲ್ಮಾನರು ಯಾವುದೇ ತಾರತಮ್ಯಕ್ಕೆ ಅವಕಾಶ ನೀಡದೇ ಮೃತದೇಹಕ್ಕೆ ವಕ್ಫ್‌ನ ಖಬರಸ್ಥಾನ್‌ಗಳಲ್ಲಿ ಅಂತ್ಯಕ್ರಿಯೆ ನಡೆಸಲು ನಿರಾಕರಿಸುವುದು, ವಿಳಂಬ ಅಥವಾ ಅಪಮಾನಗೊಳಿಸುವಂತಹ ಕೃತ್ಯಗಳಲ್ಲಿ ತೊಡಗುವುದು ಇಸ್ಲಾಂ ಧರ್ಮದ ಮೌಲ್ಯ ಹಾಗೂ ತರ್ಕಸಮ್ಮತವಾಗಿರುವುದಿಲ್ಲ. ಇಂತಹ ಘಟನೆಗಳಿಗೆ ಪ್ರೋತ್ಸಾಹ ನೀಡುವ ಧಾರ್ಮಿಕ ಅಥವಾ ಸಾಮಾಜಿಕ ಮುಖಂಡರು ಹಾಗೂ ಬೆಂಬಲಿಗರನ್ನು ನಿರ್ದಾಕ್ಷಿಣ್ಯವಾಗಿ ಭಾರತೀಯ ದಂಡಸಂಹಿತೆಯಲ್ಲಿರುವ ಪ್ರಾವಧಾನಗಳನ್ವಯ ಕಟ್ಟುನಿಟ್ಟಿನ ಕ್ರಮಕೈಗೊಳ್ಳುವುದು ಸೂಕ್ತವಾಗಿರುತ್ತದೆ.

ಆದ್ದರಿಂದ ಸ್ಥಳೀಯ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಅವರ ವ್ಯಾಪ್ತಿಯಲ್ಲಿ ಇಂತಹ ದುರ್ಘಟನೆಗಳು ಘಟಿಸಿದ್ದಲ್ಲಿ, ಕಾನೂನು ಅನ್ವಯ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಸೂಚಿಸಲಾಗಿದೆ. ವಕ್ಫ್ ಸಂಸ್ಥೆಯ ಮುತವಲ್ಲಿ/ವ್ಯವಸ್ಥಾಪನಾ ಸಮಿತಿಯವರು ಹಾಗೂ ಜಿಲ್ಲಾ ವಕ್ಫ್ ಅಧಿಕಾರಿಗಳು ಇಂತಹ ಪ್ರಕರಣಗಳಲ್ಲಿ ಆಡಳಿತ ವ್ಯವಸ್ಥೆಗೆ ನಿಷ್ಪಕ್ಷಪಾತವಾಗಿ ಸಂಪೂರ್ಣ ಸಹಕಾರ ನೀಡಲು ಸೂಚಿಸಿದೆ.

(ಮೊಹಮ್ಮದ್ ಮೊಹಸಿನ್, ಭಾ.ಆ.ಸೇ.)
ಸರ್ಕಾರದ ಕಾರ್ಯದರ್ಶಿ,
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು
ವಕ್ಫ್ ಇಲಾಖೆ, ಬೆಂಗಳೂರು.

20/6

GC(D)-40

P.T.O.

ಗೆ,

1. ಸಂಚಾಲಕರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಈ ಸುತ್ತೋಲೆಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿ 10000 ಪ್ರತಿಗಳನ್ನು ಒದಗಿಸಲು ಕೋರಲಾಗಿದೆ.
2. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಬೆಂಗಳೂರು ರವರಿಗೆ ಮಾಹಿತಿಗಾಗಿ.
4. ರಾಜ್ಯದ ಎಲ್ಲಾ ಜಿಲ್ಲಾ ವಕ್ಫ್ ಅಧಿಕಾರಿಗಳು ರಾಜ್ಯದ ಎಲ್ಲಾ ವಕ್ಫ್ ಸಂಸ್ಥೆಗಳ ಮುತವಲ್ಲಿಗಳು ಹಾಗೂ ವ್ಯವಸ್ಥಾಪನಾ ಸಮಿತಿ ರವರಿಗೆ ಕಡ್ಡಾಯವಾಗಿ ಈ ಸುತ್ತೋಲೆಯನ್ನು ರವಾನಿಸಿ ಈ ಕಾರ್ಯಾಲಯಕ್ಕೆ ಪಾಲನಾ ವರದಿ ಸಲ್ಲಿಸಲು ಸೂಚಿಸಿದೆ.
5. ಕಾರ್ಯಪಾಲಕ, ಸಿಸ್ಟಮ್ ನಿರ್ವಾಹಕರು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಬೆಂಗಳೂರು ರವರಿಗೆ ಈ ಸುತ್ತೋಲೆಯನ್ನು ಮಂಡಳಿಯ ತಂತ್ರಾಂಶದಲ್ಲಿ ಅಳವಡಿಸಲು ಸೂಚಿಸಿದೆ.
6. ಪ್ರತಿಯನ್ನು ಉರ್ದು ಮಾಧ್ಯಮದವರಿಗೆ ಪ್ರಕಟಣೆಗಾಗಿ.